**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 615 /2017**

**ಚಾಸಾ :- 04 / ಪ್ರಾಸಾ :- 03**

| | |
|---|---|
| ಹೆಸರು | ದೇವಮ್ಮ |
| ಗಂಡನ ಹೆಸರು | ಕಾಶಿಹೊನ್ನಯ್ಯ |
| ವಯಸ್ಸು | 50 |
| ಉದ್ಯೋಗ | ವ್ಯವಸಾಯ |
| ವಿಳಾಸ | ಮರಲಗೊಂಡಲ |

**ದಿನಾಂಕ: 09.02.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರಿಂದ 3 ಮತ್ತು 5 ರವರು ಪರಿಚಯ ಇರುತ್ತಾರೆ. ಆರೋಪಿತರು ಗೊತ್ತು. ಸುಮಾರು 8 ವರ್ಷಗಳ ಹಿಂದೆ ರಾತ್ರಿ 10.00 ಗಂಟೆ ಸಮಯದಲ್ಲಿ ನಾನು ಊಟ ಮಾಡುತ್ತಾ ಕೂತಾಗ ಚಾಸಾ-1 ರವರ ಮನೆಯಲ್ಲಿ ಗೋವಿಂದಪ್ಪನ ಕಡೆಯವರು ಜಗಳ ಮಾಡಲು ಹೋದರು , ನಾವು ಹೋಗಿ ಬಿಡಿಸಿರುತ್ತೇವೆ. ಆದರೆ ಯಾರು ಯಾರು ಹೊಡೆದರು ಎಂದು ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 07.5.2016 ರಂದು ವೆಂಕಟೇಶಪ್ಪರವರ ಮನೆಯಿಂದ ಆರೋಪಿಗಳು ಮತ್ತು ಅವರ ಕಡೆಯವರಾದ ಸಂತೋಷ್ , ಸೋಮಶೇಖರ್, ಈಶ್ವರ್ ಮತ್ತು ಮಲ್ಲೇಶ್ ರವರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಕೈಗಳಲ್ಲಿ ದೊಣ್ಣೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಗಲಾಟೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮನೆಯ ಪಡಸಾಲೆಯಲ್ಲಿ ಇದ್ದ ವಿದ್ಯುತ್ ಮೀಟರ್ ಬೋರ್ಡ್ ? ಹೋಡೆದು ಹಾಕಿ ಮನೆಯಲ್ಲಿದ್ದ ಚಾಸಾ-1 ರಿಂದ 3 ರವರಿಗೆ ಜಮೀನು ಭಾಗ ಸರಿಯಾಗಿ ಕೊಡಲಿಲ್ಲ ಎಂದು ಬಾಯಿಗೆ ಬಂದಂತೆ ಬೈಯ್ದರು ಎಂದರೆ ಸರಿ . ಅವರೆಲ್ಲಾ ಗೋವಿಂದಪ್ಪ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ವೆಂಕಟೇಶಪ್ಪ ರವರ ಬಲಮಂಡಿ , ಎಡತೊಡೆ, ಹೊಟ್ಟೆ ಹಾಗೂ ಇತರ ಕಡೆಗಳಲ್ಲಿ ಹೊಡೆದು ಗಾಯಪಡಿಸಿದನು ಎಂದರೆ ಸಾಕ್ಷಿ ನನಾು ನೋಡಿರುವುದಿಲ್ಲ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎಲ್ಲರೂ ಸೇರಿಕೊಂಡು ಮಚ್ಚು ಕಲ್ಲುಗಳಿಂದ ಟಿ ವಿ , ಶೋಕೇಸ್ , ಬೀರು , ಕಿಟಕಿ ಗಾಜು ಹಾಗೂ ಮನೆ ಒಳಗೆ ನಿಲ್ಲಿಸಿದ್ದ ಕೆಎ 04 ಇ ಹೆಚ್ ?1675 ಟಿ ವಿಎಸ್ ಮೆಪೆಡ್ ಅನ್ನು ಹೊಡೆದು ಹಾಕಿ ರೂ. 5000/- ನಷ್ಟ ಮಾಡಿ ಬೀರುವಿನಲ್ಲಿದ್ದ ವಸ್ತುಗಳನ್ನು ಚೆಲ್ಲಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗಲಾಟೆಯ ಶಬ್ದ ಕೇಳಿ ನನ್ನ ಹಾಗೂ ನಮ್ಮ ಅಕ್ಕಪಕ್ಕದ ಮನೆಯ ವಾಸಿಗಳಾದ ಶಿವರಾಮಯ್ಯ ಹಾಗೂ ಸಿದ್ದಲಿಂಗಯ್ಯ ಮತ್ತು ತಿಮ್ಮೇಗೌಡರವರು ಬಂದು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತೇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ನೀವುಗಳು ಈ ದಿನ ಬದುಕಿಕೊಂಡಿದ್ದೀರಿ ಇಂದಲ್ಲಾ ನಾಳೆ ಕೊಲೆ ಮಾಡಿ ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿ ಹೋದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವೆಂಕಟಪ್ಪ ರವರು ತಮಗೆ ಏಟಾಗಿದ್ದ ಸಂಬಂಧ ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಮುದ್ದೆಮಾಲು 1 ರಿಂದ 6 ಅನ್ನು ತೋರಿಸಲಾಗಿ ಸದರಿ ಮಚ್ಚು , ಗಾಜು ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎನ್ ಆರ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

? ಯಾರಿಗಾದರೂ ಹೇಳಿಕೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಪೋಲಿಸರು ಬಂದಾಗ ಕೊಟ್ಟಿರುತ್ತೇನೆ ಎಂದು ನುಡಿಯತ್ತಾರೆ. ಸದರಿ ಹೇಳಿಕೆಯಲ್ಲಿ ಏನೆಲ್ಲಾ ಹೇಳಿದೆ ಎಂಬ ವಿಚಾರ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದಾಗ ನೀವು ಸ್ಥಳದಲ್ಲಿ ಇದ್ದಿರಲಿಲ್ಲ ಮನೆಯಲ್ಲಿ ಇದ್ದಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗೋವಿಂದಪ್ಪ ಹಾಗೂ ವೆಂಕಟೇಶ್ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಜಮೀನಿನ ವಿಚಾರಕ್ಕೆ ಸದರಿ ಗೋವಿಂದಪ್ಪ ಹಾಗೂ ವೆಂಕಟೇಶ್ ಜಗಳ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಘಟನೆ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಚಾಸಾ-2 ರ ವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 6 ಸಾಮಾನ್ಯ ವಾಗಿ ಎಲ್ಲಾ ಕಡೆ ಸಿಗುವಂತಹ ವಸ್ತುಗಳು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲು 1 ರಿಂದ 6 ಗಳು ಇಂಥವೆ ಎಂದು ಹೇಳಲು ಗುರುತು ಇಟ್ಟು ಕೊಂಡಿರುತ್ತೀರಾ ಎಂದರೆ ಸಾಕ್ಷಿ ಗುರುತು ಏನು ಇಟ್ಟುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ,

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**